# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/13./2020-21

ದಿನಾಂಕ: 16.01.2021

**-:ದಿನಾಂಕ:16-01--2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:16-01-2021ರ ಶುಕ್ರವಾರ ಅಪರಾಹ್ನ 2.00 ಘಂಟೆಗೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀ.ವಿನಯ್ | ಬಿಬಿಎಂಪಿ ಕಲ್ಯಾಣ ಇಲಾಖೆ | ಹಾಜರಿದ್ದರು. |
| 5. | ಶ್ರೀ.ಸಂಜಯ್ಯ.ಎಸ್ | AE Electrical | ಹಾಜರಿದ್ದರು. |
| 6. | ಶ್ರೀ.ನವೀನ್ ಕುಮಾರ್ | ಎಇ. ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು. |
| 7. | ಶ್ರೀ.ರಾಮಕೃಷ್ಣ.ಪಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು. |
| 8. | ಶ್ರೀ.ಸಂಜಯ್ಯ | ಎಇ | ಹಾಜರಿದ್ದರು. |
| 9. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 10. | ಶ್ರೀ.ಗಂಗರಾಜು.ಟಿ.ಕೆ | ಎಇ ಕಾಡುಗುಡಿ | ಹಾಜರಿದ್ದರು. |
| 11. | ಶ್ರೀ.ಅಭೀಷೇಕ್ | ಭೈರತಿ | ಹಾಜರಿದ್ದರು. |
| 12. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 13. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 14. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 15. | ಶ್ರೀ.ಗುರಪ್ಪ | SWM Sup. | ಹಾಜರಿದ್ದರು. |
| 16. | ಶ್ರೀ.ಶೇಖರಪ್ಪ | SWM Sup. | ಹಾಜರಿದ್ದರು. |
| 17. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 18. | ಶ್ರೀಸುರೇಶ್ | JE ಕಾಡುಗುಡಿ | ಹಾಜರಿದ್ದರು. |
| 19. | ಶ್ರೀ ಪ್ರಸನ್ನ ಕುಮಾರ್.ಜೆ.ಎಚ್ | JE Kothanur | ಹಾಜರಿದ್ದರು. |
| 20. | ಶ್ರೀ.ಮಹಂತೇಶ್ | ಪಶುಪಾಲನೆ | ಹಾಜರಿದ್ದರು. |
| 21. | ಶ್ರೀ.ಮನೋಜ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು. |

| | | | |
|---|---|---|---|
| 22. | ಶ್ರೀ.ಕೆ.ಮುಂಜುನಾಥ್ | Street Light | ಹಾಜರಿದ್ದರು. |
| 23. | ಶ್ರೀ.ಶಿವರಾಜ್.ಡಿ.ಬಿ | Street Light | ಹಾಜರಿದ್ದರು. |
| 24 | ಮುನಿಯಪ್ಪ | | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಕಸದ ಸಮಸ್ಯೆಯ ಬಗ್ಗೆ ಏನಾದರು ಇದ್ದಲ್ಲಿ ತಿಳಿಸಿ ಎಂದು ಸಾರ್ವಜನಿಕರಲ್ಲಿ ತಿಳಿಸಿದರು.
- ಮಹೇಂದ್ರ ಪ್ರಸಾದ್ ರವರು ನಮ್ಮ ಏರಿಯಾ ವ್ಯಾಪ್ತಿಯಲ್ಲಿ ನಿರ್ವಹಣೆ ಸರಿಯಾಗಿ ನಡೆಯುತ್ತಿದ್ದು ಹಬ್ಬದ ತ್ಯಾಜ್ಯ ಸ್ವಲ್ಪ ಬ್ಲಾಕ್ ಸ್ಪಾಟ್‌ಗಳಲ್ಲಿ ಇರುತ್ತದೆ ಅದನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಅದರಂತೆ ಆರೋಗ್ಯ ನಿರೀಕ್ಷಕರಿಗೆ ಎರಡು ದಿನಗಳಲ್ಲಿ ತೆರವುಗೊಳಿಸವಂತೆ ಸೂಚಿಸಿರುತ್ತಾರೆ.
- ಅಧ್ಯಕ್ಷರು ರವರು ಒಣ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕೆಲಸ ನಿರ್ವಹಿಸುತ್ತಿರುವುದನ್ನು ಗುತ್ತಿಗೆದಾರರಾದ ನಾಗರತ್ನ ರವರಿಗೆ ತಿಳಿಸಿದರು.
- ನಾಗರತ್ನ ಎಸ್.ಡಬ್ಲ್ಯೂ.ಎಂ ಡ್ರೈವೆಸ್ಟ್ ಕಂಟ್ರಾಕ್ಟರ್ ರವರು ಸದ್ಯದ ಪರಿಸ್ಥಿತಿಯಲ್ಲಿ ಒಣತ್ಯಾಜ್ಯ ಸಂಗ್ರಹಣಾ ಘಟಕ ಇರುವುದಿಲ್ಲ. ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಲು ತೊಂದರೆಯಾಗಿರುತ್ತದೆ ಹಾಗೂ ಒಣ ತ್ಯಾಜ್ಯ ಸಂಗ್ರಹಣೆ ಎಲ್ಲಾ ಕಡೆ ಸರಿಯಾಗಿ ಆಗುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಹೂಡಿ ಬ್ರಿಡ್ಜ್ ಪಕ್ಕದಲ್ಲಿರುವ ಗೋಪಾಲ್‌ರೆಡ್ಡಿರವರ ತೋಟದಲ್ಲಿರುವ ಗೋಡನನ್ನು ಬಾಡಿಗೆಗೆ ಪಡೆದು ಕೆಲಸ ನಿರ್ವಹಿಸಲು ಸಹಕಾರಿಯಾಗುತ್ತದೆಂದು ತಿಳಿಸಿದರು. ಮನೆ ಮನೆಗಳಿಂದ ತ್ಯಾಜ್ಯ ವಿಂಗಡಣೆ ಸ್ವಲ್ಪ ಸರಿಯಾಗಿ ಆಗುತ್ತಿಲ್ಲ ಎಂದು ತಿಳಿಸಿದರು ಮತ್ತು ಹಲವು ಕಡೆ ಕಸ ವಿಂಗಡಿಸಲು ಬಿನ್‌ಗಳನ್ನು ಕೋರಿರುತ್ತಾರೆ ಎಂದು ನಾಗರತ್ನರವರಿಗೆ ತಿಳಿಸಿದರು.
- ಅಧ್ಯಕ್ಷರು ಕಸ ವಿಂಗಡಿಸಿ ಕೊಡಲು ಅವೈರ್‌ನೆಸ್ ಕೊಡಲು ಸೂಚಿಸಿರುತ್ತಾರೆ.
- ಆರೋಗ್ಯ ಸ್ವಾಮಿ ರವರು ಕಸ ನಿರ್ವಹಣೆ ಸರಿಯಾಗಿ ಆಗುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

**ವಿದ್ಯುತ್:-**

- ದೊಮ್ಮಸಂದ್ರ ಬೆಳತ್ತೂರು ರಸ್ತೆಯಲ್ಲಿ 11.KVA. ಲೈನ್ ಇದ್ದು Street Light ಗಳನ್ನು ಹಾಕಲು LT ಲೈನ್ ಹಾಕಬೇಕಾಗಿರುತ್ತದೆ. ಬಿಬಿಎಂಪಿ BBMP Electrical department ಬೆಸ್ಕಾಂ ರವರಿಗೆ ಪತ್ರ ಬರೆದಿದ್ದು ಕೊಡಲೆ LT ಲೈನ್ ಹಾಕಬೇಕೆಂದು ಕೋರಿರುತ್ತಾರೆ.
- ಅದರಂತೆ Bescom AE ರವರು ಲೈನ್ ಹಾಕಲು Estimate ತಯಾರಿಸಿ Approval ಗೆ ಮೇಲಾಧಿಕಾರಿಗಳಿಗೆ ಕಳುಹಿಸಿದ್ದು Approval ಆದ ನಂತರ ಕೆಲಸ ಮಾಡುವುದಾಗಿ ತಿಳಿಸಿದರು.
- ಸಾರ್ವಜನಿಕರೊಬ್ಬರ ದೂರಿನಂತೆ Electrical POLL ಬದಲಿಸಲು ಸೂಚಿಸಿರುತ್ತಾರೆ ಅದರಂತೆ ಬೆಸ್ಕಾಂ ರವರು ಪೋಲ್ ಬದಲಿಸುತ್ತೇನೆಂದು ತಿಳಿಸಿರುತ್ತಾರೆ.
- ಬೆಳತ್ತೂರು ಗ್ರಾಮದಲ್ಲಿ ಮೋಟರ್‌ಗೆ ಕೇಬಲ್ ಹಾಳಾಗಿದ್ದು ಇದನ್ನು ಸರಿಪಡಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.

- ಬೀದಿ ದೀಪಗಳ ನಿರ್ವಹಣೆ ಬಗ್ಗೆ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ಆಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಲು ಸೂಚಿಸಿದರು.
- ಸಭೆಯಲ್ಲಿದ್ದ ಸಾರ್ವಜನಿಕರು ಬೀದಿದೀಪಗಳ ದೂರುಗಳು ಬಂದ ತಕ್ಷಣ ಸರಿಪಡಿಸುತ್ತೇವೆಂದು ತಿಳಿಸಿದರು.
- ಹೊಸ ಬೀದಿ ದೀಪಗಳ ಅಳವಡಿಸುವ ಬಗ್ಗೆ AE Electrical ಬಿಬಿಎಂಪಿ ರವರು Estimation ತಯಾರಿಸಿ Head Office ಗೆ ಕಳುಹಿಸಲಾಗಿದೆ ಮತ್ತು Approval ಆಗಿ ಬಂದ ನಂತರ ಅಳವಡಿಸುವುದಾಗಿ ತಿಳಿಸಿದರು.

ಬಿ.ಡಬ್ಲ್ಯೂ.ಎಸ್,ಎಸ್.ಬಿ(**BWSSB**):-

- ಆರೋಗ್ಯ ಸ್ವಾಮಿ ಆರ್.ಡಬ್ಲ್ಯೂ.ಎ. ರವರು ನಮ್ಮ ವ್ಯಾಪ್ತಿಯಲ್ಲಿನ ನೀರಿನ Electrical POLL ಗಳಲ್ಲಿ ನಾಲ್ಕು ಕಡೆ ಡ್ಯಾಮೇಜ್ ಆಗಿದ್ದು ಅದನ್ನು ಸರಿಪಡಿಸುವಂತೆ ಕೋರಿದರು ಮತ್ತು ಸರಿಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ವಿಷಯಕ್ಕೆ ಸಂಬಂಧಿಸಿದ ಅಧಿಕಾರಿಯು ಮುಂದಿನ ದಿನಗಳಲ್ಲಿ ಈ ಸಮಸ್ಯೆಯನ್ನು ಸರಿಪಡಿಸುವುದಾಗಿ ಎಇ ಬಿ.ಡಬ್ಲ್ಯೂ.ಎಸ್,ಎಸ್.ಬಿ ರವರು ಸಭೆಯಲ್ಲಿ ತಿಳಿಸಿರುತ್ತಾರೆ.
- ಅದರಂತೆ ಆರೋಗ್ಯ ಸ್ವಾಮಿ ರವರು Electrical POLL ಗೆ ಸಂಬಂಧಿಸಿದಂತೆ ಕೇಬಲ್ ಡ್ಯಾಮೇಜ್ ಆಗಿದ್ದು ಇದನ್ನು ಸರಿಪಡಿಸುವಂತೆ ಕೋರಿದರು.
- ಬಿ.ಡಬ್ಲ್ಯೂ.ಎಸ್,ಎಸ್.ಬಿ ಸಂಬಂಧಿಸಿದಂತೆ ಅಯ್ಯಪ್ಪನಗರ ವ್ಯಾಪ್ತಿಯ 6ನೇ ಮುಖ್ಯರಸ್ತೆಯಲ್ಲಿ UGD ಲೈನ್ ಡ್ಯಾಮೇಜ್ ಆಗಿದ್ದು ಸರಿಪಡಿಸುವಂತೆ ಮುಂಜುನಾಥ್ ರವರು ತಿಳಿಸಿರುತ್ತಾರೆ.
- ಅದರಂತೆ ಎಇ ನವೀನ್ ರವರು ಹಲವು ಕಡೆ ರಸ್ತೆಗಳಲ್ಲಿ UGD ಶೀಟ್‌ಗಳನ್ನು ಹಾಕಲಾಗಿದ್ದು ಲೈನ್ ಸಹ ಇದರಲ್ಲಿ ಹೋಗಿದ್ದು ಆ ಲೈನ್‌ಗಳನ್ನು Week ಹಾಗಿರುವುದರಿಂದ ಲೈನ್‌ಗಳಲ್ಲಿ ಡ್ಯಾಮೇಜ್ ಆಗಾಗ ಆಗಿರುತ್ತದೆ ಅದನ್ನು ಸರಿಪಡಿಸುವುದಾಗಿ ತಿಳಿಸಿರುತ್ತಾರೆ. ಹಾಗೂ Gail Gas Line ಹಾಕುವವರು ಹಲವು ಕಡೆ ಬಿ.ಡಬ್ಲ್ಯೂ.ಎಸ್,ಎಸ್.ಬಿ UGD ಹಾಗೂ ವಾಟರ್ ಲೈನ್ ಡ್ಯಾಮೇಜ್ ಮಾಡಿರುತ್ತಾರೆಂದು ಎಇ ನವೀನ್ ರವರು ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.
- ಅದರಂತೆ ಅಧ್ಯಕ್ಷರು ಮುಂದಿನ ಸಭೆಗೆ Gail Gas Line ಗೆ ಸಂಬಂಧಿಸಿದ ಅಧಿಕಾರಿಗಳನ್ನು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರಲು ಅಧ್ಯಕ್ಷರು ಸೂಚಿಸಿರುತ್ತಾರೆ.

**ಬಿಬಿಎಂಪಿ ಕಲ್ಯಾಣ ಶಾಖೆಗೆ ಸಂಬಂಧಿಸಿದಂತೆ**

- ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಶ್ರೀ ವಿನಯ್ (ಬಿಬಿಎಂಪಿ ಕಲ್ಯಾಣ ಇಲಾಖೆ) ರವರು ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ತಿಳಿಸಿದರು ಮತ್ತು ಹೊಲಿಗೆ ತರಬೇತಿ ಕೇಂದ್ರ ತೆರೆಯಲು ಸಮುದಾಯ ಭವನ ಅಥವಾ ಸರ್ಕಾರಿ ಕಟ್ಟಡವನ್ನು ಒದಗಿಸಲು ಅಧ್ಯಕ್ಷರಲ್ಲಿ ಮನವಿ ಮಾಡಿದರು.
- ಬೀದಿ ಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆಯಡಿಯಲ್ಲಿ 10000 ರೂಗಳನ್ನು ನೀಡಲು ಅರ್ಜಿಗಳನ್ನು ಸ್ವೀಕರಿಸುತ್ತಿದ್ದೇವೆ ಎಂದು ಅಧ್ಯಕ್ಷರಿಗೆ ತಿಳಿಸಿದರು.
- ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಕಾರು, ಆಟೋ, ಲ್ಯಾಪ್‌ಟಾಪ್, ಅಂಗವಿಕಲರ ವಾಹನ ಮತ್ತು ಶಾಲಾ ಶುಲ್ಕು ಮರುಪಾವತಿಗೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ಸಭೆಯಲ್ಲಿ ಶ್ರೀ ವಿನಯ್ (ಬಿಬಿಎಂಪಿ ಕಲ್ಯಾಣ ಇಲಾಖೆ) ರವರು ತಿಳಿಸಿರುತ್ತಾರೆ

**ಇತರೆ ವಿಷಯಗಳು:-**

- ಒಂಟಿ ಮನೆಗೆ ಸಂಬಂಧಿಸಿದಂತೆ 2016-17 ರಲ್ಲಿ ಒಟ್ಟು 45 ಮನೆಗಳು ಆಯ್ಕೆಯಾಗಿದ್ದು ಅದರಲ್ಲಿ 30 ಮನೆಗಳು ಎಸ್.ಸಿ., ಎಸ್.ಎಸ್‌ಟಿ. ಹಾಗೂ 15 ಮನೆಗಳು ಓಬಿಸಿ ಗೆ ಆಯ್ಕೆಯಾಗಿರುತ್ತದೆ.
- ಶ್ರೀನಿವಾಸ್ ಬಿನ್ ನಾರಾಯಣಪ್ಪ ರವರಿಗೆ 2017 ರಲ್ಲಿ ವರ್ಕ ಆರ್ಡರ್ ಆಗಿರುತ್ತದೆ ಆದರೆ ಇವರು ಇದುವರೆಗೂ ಯಾವುದೇ ಒಂಟಿ ಮನೆ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ ಆದ್ದರಿಂದ ಇವರ ಬದಲಿಗೆ ರೇಣುಕಾ ಕೋಂ ರಾಜಪ್ಪ.ಪಿ. ರವರಿಗೆ ಎಂಎಲ್‌ಎ ಮಹದೇವಪುರ ರವರ ಕಡೆಯಿಂದ ಪತ್ರ ನೀಡಿರುತ್ತಾರೆ ಆದ್ದರಿಂದ ವಾರ್ಡ್ ಕಮಿಟಿಯಲ್ಲಿ ಚರ್ಚಿಸಿ ರೇಣುಕಾ ಕೋಂ ರಾಜಪ್ಪ.ಪಿ ಸಾದರಮಂಗಳ ರವರು ಕಡು ಬಡವರಾಗಿದ್ದು ಎಸ್.ಸಿ, ಎಸ್.ಟಿ. ವರ್ಗಕ್ಕೆ ಸೇರಿರುತ್ತಾರೆ. ಆದ್ದರಿಂದ ಇವರಿಗೆ ಒಂಟಿ ಮನೆ ಯೋಜನೆ ನಿರ್ಮಿಸಲು ಶ್ರೀನಿವಾಸ್ ಬಿನ್ ನಾರಾಯಣಪ್ಪರವರ ಬದಲಾಗಿ ರೇಣುಕಾ ಕೋಂ ರಾಜಪ್ಪರವರಿಗೆ ನೀಡಲು ವಾರ್ಡ್ ಕಮಿಟಿಯಲ್ಲಿ ತಿರ್ಮಾನಿಸಲಾಯಿತ್ತು.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ